# ಜಾನ್ ಬ್ರೋಡಸ್ ವಾಟ್ಸನ್ (1878-1958)

**ಇಂದಿರಾ ಜೈಪ್ರಕಾಶ್**



***

ವಾಟ್ಸನ್ ವರ್ತನಾವಾದವನ್ನು ಹುಟ್ಟುಹಾಕಿ ಮನೋವಿಜ್ಞಾನದ ಚರಿತ್ರೆಯಲ್ಲಿ ಸ್ಥಿರವಾದ ಸ್ಥಾನ ಪಡೆದಿದ್ದಾನೆ. ವಾಟ್ಸನ್ ಸೌತ್ ಕೆರೊಲಿನಾದ ಪುಟ್ಟ ಗ್ರಾಮದಲ್ಲಿ ಜನಿಸಿದ್ದ. ಇವನ ತಂದೆ ಕುಡುಕನಾಗಿದ್ದು ಕುಟುಂಬ ತ್ಯಜಿಸಿ ಬೇರೆ ಹೆಣ್ಣಿನೊಡನೆ ಹೊರಟು ಹೋಗಿದ್ದ. ಇವನ ತಾಯಿ ಎಮ್ಮಾ ಬ್ಯಾಪ್ಟಿಸ್ಟ್ ಮತದವಳಾಗಿದ್ದು ಧರ್ಮಭೀರು ಮತ್ತು ಮಕ್ಕಳಿಗೆ ಬಹಳ ಕಟ್ಟುಪಾಡುಗಳನ್ನು ಹಾಕುತ್ತಿದ್ದಳಂತೆ. ಇದನ್ನು ವಿರೋಧಿಸಿದ ವಾಟ್ಸನ್ ಮುಂದೆ ಧರ್ಮವನ್ನು ತ್ಯಜಿಸಿ ತಾನು ನಾಸ್ತಿಕನೆಂದು (atheist) ಸಾರಲು ಇದೇ ಕಾರಣ ಎನ್ನಲಾಗಿದೆ. ಎಮ್ಮಾ ಇವನ ಭವಿಷ್ಯ ಸುಧಾರಿಸಲು ತನ್ನ ಪುಟ್ಟ ಹೊಲವನ್ನು ಮಾರಿ ಗ್ರೀನ್‌ವಿಲ್ಲೆಗೆ ಬಂದು ಇವನನ್ನು ಶಾಲೆಗೆ ಸೇರಿಸಿದಳು. ಶಾಲೆಯಲ್ಲಿ ಇವನು ಸೋಮಾರಿ ಮತ್ತು ಯಾರೊಡನೆಯೂ ಸೇರದವನು ಎನ್ನಿಸಿಕೊಂಡಿದ್ದ. 'ಹಳ್ಳಿ ಮುಕ್ಕ' ಎಂದು ಸಹಪಾಠಿಗಳಿಂದ ಕೀಟಲೆಗೆ ಒಳಗಾಗುತ್ತಿದ್ದ. ಇವನು ಹೊಡೆದಾಟ, ಜಗಳಗಳಲ್ಲಿ ತೊಡಗಿ ಕಾನೂನಿನ ಕೈಗೂ ಸಿಕ್ಕಿ ಬಿದ್ದಿದ್ದ. ಜೀವಮಾನದುದ್ದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ವಾಟ್ಸನ್ ಜನರ ಹುಬ್ಬೇರಿಸುವ ಇಲ್ಲವೆ ಸಮಾಜವನ್ನು ಬಡಿದೆಬ್ಬಿಸುವಂತಹ ಕಾರ್ಯಗಳಿಗೆ ಪ್ರಖ್ಯಾತನಾಗಿದ್ದ. ತಾಯಿಯ ನೆರವು ಮತ್ತು ತನ್ನ ಅರೆಕಾಲಿಕ ಕೆಲಸಗಳಿಂದ ಹೇಗೋ ವಿದ್ಯಾಭ್ಯಾಸ ಮುಗಿಸಿ ನಂತರ ಶಿಕಾಗೋ ವಿಶ್ವವಿದ್ಯಾಲಯ ಸೇರಿದ. ಇಲ್ಲಿ ಇವನಿಗೆ ಅನೇಕ ಬುದ್ಧಿಶಾಲಿ ವ್ಯಕ್ತಿಗಳ ಸಂಪರ್ಕ ಬೆಳೆಯಿತು. ಇಲ್ಲಿ ಪ್ರಾಣಿಗಳ ಕಲಿಕೆಯ ಬಗ್ಗೆ ಸಂಶೋಧನೆ ಮಾಡಿ ನಂತರ 1908 ರಲ್ಲಿ ಜಾನ್ ಹಾಪ್‌ಕಿನ್ಸ್ ನಲ್ಲಿ ಕೆಲಸಕ್ಕೆ ಸೇರಿ ಸಂಶೋಧನೆಗಳನ್ನು ಮುಂದುವರಿಸಿದ.

ಈ ವೇಳೆಗೆ ಪಾವ್ಲಾವ್ ನಡೆಸುತ್ತಿದ್ದ ಸಂಶೋಧನೆಗಳ ಬಗ್ಗೆ ಇವನಿಗೆ ಆಸಕ್ತಿ ಬೆಳೆದಿತ್ತು. 1913ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಇವನು 'ವರ್ತನವಾದಿಗಳ ದೃಷ್ಟಿಯಲ್ಲಿ ಮನೋವಿಜ್ಞಾನ' ಎಂಬ ಉಪನ್ಯಾಸದಲ್ಲಿ 'ಬಿಹೇವಿಯರ್

ಮ್ಯಾನಿಫೆಸ್ಟೋ (Behavior Manifesto)' ಎಂಬ ಪ್ರಣಾಳಿಕೆಯನ್ನು ಘೋಷಿಸಿದ. ಇದರಲ್ಲಿ ನೂತನ 'ಬಿಹೇವಿಯರಿಸಂ (Behaviorism)' ಎನ್ನುವ ಮನೋವಿಜ್ಞಾನವನ್ನು ಪರಿಚಯಿಸಿದ. ಇವನ ಪ್ರಕಾರ ಮನೋವಿಜ್ಞಾನ ಒಂದು ವಸ್ತುನಿಷ್ಠ ಪ್ರಾಯೋಗಿಕ ಅಧ್ಯಯನ ಕ್ಷೇತ್ರವಾಗಿದ್ದು ಇದರ ಮುಖ್ಯ ಉದ್ದೇಶ ವರ್ತನೆಯ ನಿಯಂತ್ರಣ ಮತ್ತು ಅದರ ಮುನ್ಸೂಚನೆ ನೀಡುವುದು. ಪ್ರಾಣಿಗಳಾಗಲಿ, ಮಾನವರಾಗಲಿ ಅವರ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಯಾವುದನ್ನು ನಾವು ನೋಡಬಹುದೋ, ಅಳೆಯಬಹುದೋ ಅಷ್ಟೇ ಸಾಕು. ಇವನು ಐವಾನ್ ಪಾವ್ಲಾವ್‌ನ ಸಂಶೋಧನೆಗಳಿಂದ ಪ್ರಭಾವಿತನಾಗಿ ಅದನ್ನು ಸರಳೀಕರಿಸಿ ತನ್ನ ಬರಹಗಳಲ್ಲಿ ಉಪಯೋಗಿಸಿದ. ಮನೋವಿಜ್ಞಾನವನ್ನು ಅಂತರವಲೋಕನ ಮುಂತಾದ ಅನಿರ್ದಿಷ್ಟ ವಿಧಾನಗಳಿಂದ ಬಿಡಿಸಿ ಅದನ್ನು ವಿಜ್ಞಾನವನ್ನಾಗಿ ಸ್ಥಾಪಿಸುವುದೇ ಇವನ ಗುರಿಯಾಗಿತ್ತು.

ವಾಟ್ಸನ್  ಚೇತನದ ಇರುವನ್ನೇ ನಿರಾಕರಿಸಿದ. ಮನಸ್ಸು ಎನ್ನುವ ಪದವನ್ನು ಮನೋವಿಜ್ಞಾನದಿಂದ ತೆಗೆದು ವರ್ತನೆ ಎಂಬ ಪದ ಹಾಕಬೇಕು.  ಏಕೆಂದರೆ ಗೋಚರವಾಗುವುದು, ಅಳೆಯಲಾಗುವುದು ವರ್ತನೆಯನ್ನು ಮಾತ್ರ ಎಂದು ವಾದಿಸಿದ. ಹೊರಗೆ ಕಾಣಿಸುವ ಪ್ರತಿಕ್ರಿಯೆಗಳಿಂದ ಮಾನವ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ , ಆಂತರಿಕ ಮನಸ್ಥಿತಿಗಳಲ್ಲ. ಮಾಪನ ಮಾಡಬಹುದಾದಂತಹ ವಿಷಯಗಳ ಅಧ್ಯಯನ ಮಾತ್ರ ಮನೋವಿಜ್ಞಾನವನ್ನು ಆಧುನೀಕರಿಸಿ ಹೊಸ ಯುಗಕ್ಕೆ ಕೊಂಡೊಯ್ಯುತ್ತದೆ ಎಂದು ವಾದಿಸಿದ.  ಭಾಷೆಯನ್ನು ಧ್ವನಿಗೆ ಸಂಬಂಧಿಸಿದ ಅಂಗಗಳ ಉಪಯೋಗದಿಂದ ಕಲಿಯಲಾಗುತ್ತದೆ. ಹುಟ್ಟಿನಿಂದ ಕಲಿಯದೆ ಇರುವ ಮೂರು ಸಂವೇಗಗಳು ಇರುತ್ತವೆ- ಅವು ಭಯ (phobia), ಕೋಪ(anger) ಮತ್ತು ಮಮತೆ. ಜೋರಾದ ಸದ್ದು, ಜಾರಿಬೀಳುವುದು ಮುಂತಾದವು ಶಿಶುವಿನಲ್ಲಿ ಭೀತಿಯ ಪ್ರತಿಕ್ರಿಯೆ ಹುಟ್ಟಿಸುತ್ತವೆ. ಶಿಶು ಮಿಸುಕಾಡದಂತೆ ಹಿಡಿಯುವುದು, ಬಲವಂತಮಾಡುವುದು ಕೋಪ ಬರಿಸುತ್ತದೆ. ಪಾಲಕರು ಶಿಶುವನ್ನು ನೇವರಿಸುವುದು, ಮುದ್ದಾಡುವುದು ಮಮತೆಯ ಭಾವ ಹುಟ್ಟಿಸುತ್ತದೆ. ಮಿಕ್ಕೆಲ್ಲ ಸಂವೇಗಗಳಿಗೂ ಕಲಿಕೆಯೇ ಕಾರಣ. ಇವನ, ಇಂತಹ  ವಾದಗಳು ಭಾಷೆ, ಸೃಜನಾತ್ಮಕತೆ, ಉಚ್ಚಮಟ್ಟದ ಸಂಜ್ಞಾನತ್ಮಕ ಕ್ರಿಯೆಗಳನ್ನು ವಿವರಿಸಲು ಸಮರ್ಥವಾಗಿರಲಿಲ್ಲ.

ವಾಟ್ಸನ್‌ನ ಪ್ರಕಾರ ಪರಿಸರವೇ ವರ್ತನೆಗೆ ಕಾರಣ. ಅವನು "ಹೇಳಿದ್ದ" ಎನ್ನಲಾದ, - ನನಗೆ 12 ಆರೋಗ್ಯಕರ ಶಿಶುಗಳನ್ನು ಕೊಡಿ. ಅವರ ಒಳಗಿನ ಗುಣಗಳು ಏನೇ ಇದ್ದರೂ ಅವರನ್ನು ನಾನು ವೈದ್ಯ, ವಕೀಲ, ಕಳ್ಳ - ಹೀಗೆ ತಯಾರುಮಾಡಬಲ್ಲೆ ಎಂಬ ಹೇಳಿಕೆಯೂ ವರ್ತನವಾದದ ಮೂಲ ಸಾರಾಂಶವನ್ನು ಬಿಂಬಿಸುತ್ತದೆ. ಇವನು ರೇಯ್ನರ್ ಎಂಬ ಸಹೋದ್ಯೋಗಿಯ ಜೊತೆಗೆ 1919ರಲ್ಲಿ ಮಾಡಿದ 'ಲಿಟಲ್ ಆಲ್ಬರ್ಟ್ (little Albert)' ಪ್ರಯೋಗ ಇಂದಿಗೂ ಪಠ್ಯಪುಸ್ತಕಗಳಲ್ಲಿ ವಿವರಿಸಲ್ಪಡುತ್ತದೆ. ಈ ಪ್ರಯೋಗದಲ್ಲಿ  ಒಂಬತ್ತು ತಿಂಗಳ ಮಗು 'ಆಲ್ಬರ್ಟ್ ' ನನ್ನು ಒಂದು ಮೊಲದೊಡನೆ ಆಟವಾಡಲು ಬಿಟ್ಟಿದ್ದರು. ಮಗು ಯಾವ ರೀತಿಯ ಭಯವೂ ಇಲ್ಲದೆ ಆಡುತ್ತಿತ್ತು. ನಂತರ ಮಗುವಿನ ಮುಂದೆ ಮೊಲ(rabbit)ವನ್ನು ಹಿಡಿದು ಅದೇ ಸಮಯದಲ್ಲಿ ಕಬ್ಬಿಣದಿಂದ ಜೋರಾಗಿ ಸಪ್ಪಳ ಮಾಡಲಾಗುತ್ತಿತ್ತು. ಸದ್ದಿಗೆ ಮಗು ಹೆದರಿ ಅರಚಲು ಪ್ರಾರಂಭಿಸುತ್ತಿತ್ತು. ಇದನ್ನೇ  ಮತ್ತೆ ಮತ್ತೆ ಮಾಡಿ ಮೊಲದ ಬಗ್ಗೆ ಮಗುವಿನಲ್ಲಿ ಭಯ ಹುಟ್ಟಿಸಲಾಗುತ್ತಿತ್ತು. ಮಗು ಮುಂದೆ ಮೊಲ ಮಾತ್ರವಲ್ಲದೆ ತುಪ್ಪಳ ಇರುವ ಯಾವ ಪ್ರಾಣಿ, ಆಟಿಕೆ ನೋಡಿದರೂ ಹೆದರಲು ಕಲಿಯಿತು. ಇದನ್ನು, ಪರಿಸರವನ್ನು ತಿರುಚಿ ಹೇಗೆ ಭಾವನೆಗಳನ್ನೂ ಕಲಿಸಬಹುದು ಎಂಬುದಕ್ಕೆ ಸಾಕ್ಷಿ ಎನ್ನಲಾಗಿತ್ತು. ಈ ಪ್ರಯೋಗ 'ಅನೈತಿಕ' ಎಂದು ಮುಂದೆ ಬಹಳ  ಟೀಕೆಗಳಾದವು. ಏಕೆಂದರೆ ಮಗುವಿನಲ್ಲಿ ಭಯಹುಟ್ಟಿಸಿ ನಂತರ ಅದನ್ನು ನಿವಾರಿಸಿರಲಿಲ್ಲ.  ಮುಂದೆ ಮೇರಿ ಕೊವರ್ ಜೋನ್ಸ್ ಎಂಬ ಇವನ ಸಹೋದ್ಯೋಗಿ ಹೀಗೆ 'ಕಲಿಸಿದ' ಭಯವನ್ನು ನಿವಾರಿಸುವ ವಿಧಾನಗಳನ್ನು ಕಂಡುಹಿಡಿದಳು.

ವಾಟ್ಸನ್ ಶಿಕಾಗೋದಲ್ಲಿ ಇರುವಾಗಲೇ ತನ್ನ ವಿದ್ಯಾರ್ಥಿನಿಯಾಗಿದ್ದ ಮೇರಿ ಇಕ್ಸ್ ಎಂಬುವವಳನ್ನು ಪ್ರೀತಿಸಿದ್ದ. ಶಿಷ್ಯೆಯ ಜೊತೆ ಇಂತಹ ಸಂಬಂಧ ಅನೈತಿಕ ಎಂಬ ನಂಬುಗೆ ಇದ್ದುದ್ದರಿಂದ ಅವಳು ವಿದ್ಯಾಲಯ ಬಿಟ್ಟನಂತರ ಅವಳನ್ನು ವಿವಾಹವಾಗಿದ್ದ. ಅವರಿಗೆ ಎರಡು ಮಕ್ಕಳಾದವು. 1920ರಲ್ಲಿ ಇವನ ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕಿಯಾಗಿದ್ದ ರೊಸಾಲಿ ರೇಯ್ನರ್ ಜೊತೆ ನಡೆಸಿದ ಪ್ರಣಯ ಪ್ರಸಂಗ ಬೆಳಕಿಗೆ ಬಂದಿತು. ವಿಷಯ ತಿಳಿದ ಮೇರಿ ಇವನನ್ನು ತೊರೆದಳು. ರೊಸಾಲಿ ಅವನ ವಿದ್ಯಾರ್ಥಿ ಎನ್ನುವುದಷ್ಟೇ ಅಲ್ಲದೆ ಅವಳ ಕುಟುಂಬ ಬಹಳ ಪ್ರಭಾವಶಾಲಿಯಾಗಿತ್ತು. ಹೀಗಾಗಿ ಜಾನ್ ಹಾಪ್‌ಕಿನ್ಸ್ (Johns Hopkins) ಇವನನ್ನು ಹೊರಹಾಕಿತು. ತನ್ನ ಪತ್ನಿ ಮೇರಿಗೆ ವಿಚ್ಛೇದನ ಕೊಟ್ಟು 1921 ರಲ್ಲಿ ರೊಸಾಲಿಯನ್ನು ಮದುವೆಯಾಗಿ ಎರಡು ಮಕ್ಕಳನ್ನು ಪಡೆದ. ಇವನ ವಿಚ್ಛೇದನದ ಪ್ರಕರಣ ಎಂತಹ ವಿವಾದ ಮತ್ತು ರಾಷ್ಟ್ರ ಮಟ್ಟದಲ್ಲಿ ಅಪಪ್ರಚಾರ ಪಡೆದಿತ್ತೆಂದರೆ ಅವನಿಗೆ ಎಲ್ಲಾ ವಿಶ್ವವಿದ್ಯಾಲಯದ ಬಾಗಿಲುಗಳು ಮುಚ್ಚಿದ್ದವು.

ಜಾನ್ ಹಾಪ್‌ಕಿನ್ಸ್ ನಿಂದ ಹೊರಬಿದ್ದವನಿಗೆ ಅವನ ಸಹೋದ್ಯೋಗಿಯಾಗಿದ್ದ ಟಿಟ್ಚನರ್‌ನ ಸಹಾಯದಿಂದ ಒಂದು ಜಾಹೀರಾತು ಕಂಪನಿಯಲ್ಲಿ ಕೆಲಸ ಸಿಕ್ಕಿತು. ತನ್ನ ಹೊಸ ಕೆಲಸದಲ್ಲಿ ಶೂಗಳನ್ನು ಮಾರುವುದರಿಂದ ಪ್ರಾರಂಭಿಸಿ, ವ್ಯವಹಾರದ ಮರ್ಮ ಅರಿತು ಒಂದೊಂದೇ ಮೆಟ್ಟಿಲು ಏರಿ ಎರಡು ವರ್ಷಗಳಲ್ಲಿ ಆ ಕಂಪನಿಯ ಉಪಾಧ್ಯಕ್ಷ ಸ್ಥಾನಕ್ಕೇರಿದ. ತನ್ನ ಅಧ್ಯಾಪಕ ವೃತ್ತಿಗಿಂತ ಅಧಿಕ ವರಮಾನ ಪಡೆಯಲಾರಂಭಿಸಿದ. ಮಹಿಳೆಯರನ್ನು ಧೂಮಪಾನಮಾಡಲು ಉತ್ತೇಜಿಸುವ ಜಾಹೀರಾತು ತಯಾರಿಸಿ, ಅದನ್ನು 'ನನ್ನ ಕೆಲಸವಷ್ಟೆ' ಎಂದು ಸಮರ್ಥಿಸಿಕೊಂಡಿದ್ದ. ವಿಶ್ವಸಮರದ ವೇಳೆ ಅನ್ವಯಿಕ ವಿಧಾನಗಳನ್ನು ಬಳಸಿ ಸೇನೆಗೆ ನೇಮಕಾತಿ ಮತ್ತು ತರಬೇತಿಯ ಪದ್ಧತಿ ಪ್ರಚುರಪಡಿಸಿದ.

ಅಧ್ಯಾಪಕ ವೃತ್ತಿ ಬಿಟ್ಟ ನಂತರ ಮಕ್ಕಳನ್ನು ಬೆಳೆಸುವ ಬಗ್ಗೆ ಈತ ಪ್ರಭಾವಶಾಲಿ ಪುಸ್ತಕ ಬರೆದ. ಮೂಲಪ್ರವೃತ್ತಿ ಎಂಬುದಿಲ್ಲ, ಎಲ್ಲವೂ ಕಲಿಕೆಯನ್ನು ಆಧರಿಸಿರುತ್ತದೆ. ಮಕ್ಕಳನ್ನು ಪುಟ್ಟ ಪ್ರೌಢರಂತೆ ಸಾಕಬೇಕು, ತಾಯಿ ಅತಿ ಮಮತೆ ತೋರಿಸಬಾರದು ಎಂದು ಬಹಳ ವ್ಯಾವಹಾರಿಕ ವಿಧಾನ ಪ್ರತಿಪಾದಿಸಿದ್ದ. ಇವನ ಪುಸ್ತಕಗಳು ಅನೇಕ ಶಿಶು ಮನೋವಿಜ್ಞಾನಿಗಳ ಟೀಕೆಗೆ ಗುರಿಯಾದವು . ಪ್ರಚೋದನೆ-ಪ್ರತಿಕ್ರಿಯೆಗಳನ್ನು ನಿಯಂತ್ರಿಸಿ ಪಾಲಕರು ಮಕ್ಕಳಲ್ಲಿ ಯಾವ ವರ್ತನೆಯನ್ನಾದರೂ ಕಲಿಸಬಹುದು ಎಂಬ ಇವನ ವಾದ ವಿವಾದಗಳನ್ನು ಸೃಷ್ಟಿಸಿತು. ಅದೇನೇ ಇದ್ದರೂ ಅವನ ಪುಸ್ತಕಗಳು ಬಹಳ ಜನಪ್ರಿಯವಾಗಿ ಸಾವಿರಾರು ಪ್ರತಿಗಳು ಖರ್ಚಾಗಿ ಇವನ ಬೊಕ್ಕಸ ತುಂಬಿತು. ಈತ ಜನಪ್ರಿಯ ಲೇಖನಗಳನ್ನು ಬಹಳ ವರ್ಷ ಬರೆಯುತ್ತಿದ್ದ. ಇವನು ಬರೆದ ಮನೋವಿಜ್ಞಾನದ ಪುಸ್ತಕಗಳು ಅಂದಿನ ವಿದ್ಯಾರ್ಥಿಗಳನ್ನು ಪ್ರಭಾವಿಸಿ, ಮುಂದೆ ಸ್ಕಿನ್ನರ್ ಮುಂತಾದವರನ್ನು ಈ ಕ್ಷೇತ್ರಕ್ಕೆ ಆಕರ್ಷಿಸಿತು.

ರೇಯ್ನರ್ 1935 ರಲ್ಲಿ ತೀರಿಕೊಂಡನು. ಇವನು ತನ್ನ ೮೦ನೆಯ ವಯಸ್ಸಿನವರೆಗೂ ಒಂಟಿ ಜೀವನ ನಡೆಸಿದ್ದ. ಮಕ್ಕಳೊಡನೆ ಇವನ ಸಂಬಂಧ ಹಿತಕರವಾಗಿರಲಿಲ್ಲ. ಇವನು ತನ್ನ ಮಕ್ಕಳ ಮೇಲೆ ಪ್ರಯೋಗಗಳನ್ನು ನಡೆಸುತ್ತಿದ್ದ. ತನ್ನ ಸಿದ್ಧಾಂತದ ಪ್ರಕಾರ ಅವರನ್ನು ಬೆಳೆಸುತ್ತಿದ್ದ ಎಂಬ ಅಪಾದನೆಯಿದೆ.  ಮೇರಿಯಲ್ಲಿ ಹುಟ್ಟಿದ್ದ ಒಬ್ಬ ಮಗ ಆತ್ಮಹತ್ಯೆ ಮಾಡಿಕೊಂಡಿದ್ದ. ಅವನ ಮಗಳು ತನ್ನ ಮಗುವಿನ ಮಾನಸಿಕ ತೊಂದರೆಗಳಿಗೆ ವಾಟ್ಸನ್ ಹೇಳಿದ ವಿಧಾನಗಳನ್ನು ಪಾಲಿಸಿದ್ದು ಕಾರಣ ಎಂದು ದೂಷಿಸಿದ್ದಳು. ರೊಸಾಲಿ ರೇಯ್ನರ್ ಇವನ ಪ್ರಯೋಗಗಳಿಗೆ ಸಹಾಯಕಿಯಾಗಿದ್ದರೂ ಮಕ್ಕಳನ್ನು ಸಾಕುವುದರ ಬಗ್ಗೆ ಇವನ ವಿಚಾರಗಳ ಬಗ್ಗೆ ಅವಳಿಗೆ ಒಮ್ಮತವಿತ್ತೋ ತಿಳಿದಿಲ್ಲ. ರೊಸಾಲಿಯಿಂದ ಪಡೆದ ಎರಡು ಮಕ್ಕಳೂ ಆತ್ಮಹತ್ಯೆಗೆ ಪ್ರಯತ್ನಿಸಿದ್ದು, ಒಬ್ಬ ಮಗ ಈ ಪ್ರಯತ್ನದಲ್ಲಿ ಸತ್ತು ಹೋಗಿದ್ದ.

ಜಾನ್ ಬರ್ನ್ಹಾಮ್ ಎಂಬ ಚರಿತ್ರಕಾರ ಇವನನ್ನು ಆತನ ಇಳಿವಯಸ್ಸಿನಲ್ಲಿ ಭೇಟಿಮಾಡಿದ್ದ. ಆಗಲೂ ಇವನು ಬಹಳ ಧೃಢ ಅಭಿಪ್ರಾಯಗಳು ಮತ್ತು ತನ್ನನ್ನು ಟೀಕಿಸಿದವರ ಬಗ್ಗೆ ಕಹಿಭಾವನೆ ಹೊಂದಿದ್ದ ಎಂದು ದಾಖಲಿಸಿದ್ದಾನೆ. 1950 ರ ಹೊತ್ತಿಗೆ ವರ್ತನವಾದ ತನ್ನ ಹಿಡಿತ ಕಳೆದುಕೊಂಡರೂ, ಅದರ ಕೆಲವು ತತ್ವಗಳು ಇಂದಿಗೂ ಬಳಕೆಯಾಗುತ್ತಿವೆ. ವರ್ತನೆಯ ಮಾರ್ಪಾಡು ಮಾಡುವ ಚಿಕಿತ್ಸೆಗಳಲ್ಲಿ ಇವನ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಲಾಗಿದೆ. ಅವನು ಸಾಯುವ ಮೊದಲು ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಶನ್, ಮನೋವಿಜ್ಞಾನ ಕ್ಷೇತ್ರಕ್ಕೆ ಅವನ ಕೊಡುಗೆಯನ್ನು ಸ್ಮರಿಸಿ ಅವನನ್ನು ಪುರಸ್ಕರಿಸಿತು.

***